# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 453 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 07/12/2023 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರ್ಮಿಕರ ಇಲಾಖೆಯ ವತಿಯಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ; ಅದರಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಗಳಿಂದ 2021-22ರಿಂದ 2023-24 (ನವೆಂಬರ್ ರವರೆಗೆ) ನಡೆಸಲಾದ ಉದ್ಯೋಗ ಮೇಳ ಹಾಗೂ ಪ್ರಯೋಜನ ಪಡೆದವರ ಸಂಖ್ಯೆಯ ವಿವರವನ್ನು **ಅನುಬಂಧ- 1ರಲ್ಲಿ** ಇರಿಸಲಾಗಿದೆ.<br><br>ಕಾರ್ಮಿಕ ಇಲಾಖೆಯ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾವುದೇ ಉದ್ಯೋಗ ಮೇಳವನ್ನು ಆಯೋಜಿಸಿರುವುದಿಲ್ಲ. |
| ಆ) | ಕಾರ್ಮಿಕ ಕೌಶಲ್ಯ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ: ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು: | **<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**<br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅನುಷ್ಠಾನಗೊಳಿಸಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಮತ್ತು ಆಶಾದೀಪ ಯೋಜನೆ ಹಾಗೂ ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಸಹಯೋಗದೊಂದಿಗೆ ಅಂತರಾಷ್ಟ್ರೀಯ ವಲಸೆ ಕೇಂದ್ರದ (ಐ.ಎಂ.ಸಿ-ಕೆ) ವತಿಯಿಂದಲೂ ಕಾರ್ಮಿಕ ಕೌಶಲ್ಯಾಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.<br><br>ಕಳೆದ ಎರಡು ವರ್ಷಗಳಲ್ಲಿ ಅಂದರೆ 2022-23ನೇ ಸಾಲಿನಲ್ಲಿ ಮೊದಲನೆ ಹಂತದಲ್ಲಿ 210 ಮಹಿಳಾ ಪ.ಜಾ/ ಪ.ಪಂ ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅನುಷ್ಠಾನಗೊಳಿಸಿರುವ |

| | | |
|---|---|---|
| | | ಆಶಾದೀಪ ಯೋಜನೆಯಡಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ನೀಡಲಾಗಿರುತ್ತದೆ. ತರಬೇತಿ ವೆಚ್ಚದ ರೂಪದಲ್ಲಿ ಇದುವರೆವಿಗೂ ರೂ.20.87 ಲಕ್ಷಗಳ ಅನುದಾನವನ್ನು ವ್ಯಯಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಅಸಂಘಟಿತ ವಲಯದ 150 ಮಹಿಳಾ ಅಭ್ಯರ್ಥಿಗಳಿಗೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗಿದ್ದು, ರೂ.13.88 ಲಕ್ಷಗಳ ಅನುದಾನವನ್ನು ವ್ಯಯಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಸಹಯೋಗದೊಂದಿಗೆ ಅಂತರಾಷ್ಟ್ರೀಯ ವಲಸೆ ಕೇಂದ್ರದ (ಐ.ಎಂ.ಸಿ-ಕೆ) ವತಿಯಿಂದ ಕರ್ನಾಟಕ ರಾಜ್ಯದ ಯುವಕ - ಯುವತಿಯರನ್ನು ಒಳಗೊಂಡಂತೆ ಎಲ್ಲಾ ಕಾರ್ಮಿಕ ವರ್ಗದ ಉದ್ಯೋಗಾಕಾಂಕ್ಷಿಗಳಿಗೆ ವಿದೇಶಿ ಉದ್ಯೋಗಾವಕಾಶವನ್ನು ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಒದಗಿಸಲಾಗುತ್ತಿದೆ.<br><br>**ರಾಷ್ಟ್ರೀಯ ಜೀವನೋಪಾಯ ಅಭಿಯಾನ (ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್)**<br><br>ರಾಜ್ಯದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಹಾಗೂ ಆರ್ ಸೆಟಿ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಯುವಕ ಯುವತಿಯರಿಗೆ ತರಬೇತಿ ನೀಡಿ ಉದ್ಯೋಗ ಒದಗಿಸಿದ ಬಗ್ಗೆ ಕೆಳಕಂಡಂತೆ ವಿವರಿಸಿದೆ.<br><br>• ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು (ಆರ್‌ಸೆಟಿ)<br><br><table><tr><th>ವರ್ಷ</th><th>ತರಬೇತಿ ಹೊಂದಿದವರು</th><th>ಸ್ವಯಂ ಉದ್ಯೋಗ ಹೊಂದಿದವರು</th></tr><tr><td>2020-21</td><td>18332</td><td>5751</td></tr><tr><td>2021-22</td><td>24973</td><td>9704</td></tr></table> |

<table>
<tr><td></td><td></td><td>

• ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ) ವಿವರವನ್ನು (**ಅನುಬಂಧ-2 ಮತ್ತು 3**) ರಲ್ಲಿ ಲಗತ್ತಿಸಿದೆ.

<table>
<tr><th>ವರ್ಷ</th><th>ತರಬೇತಿ ಹೊಂದಿದವರು</th><th>ವೇತನಾಧಾರಿತ ಉದ್ಯೋಗ ಹೊಂದಿದವರು</th></tr>
<tr><td>2021-22</td><td>1225</td><td>840</td></tr>
<tr><td>2022-23</td><td>1143</td><td>709</td></tr>
</table>

ಕಳೆದ 02 ವರ್ಷಗಳಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಕೌಶಲ್ಯ ಅಭಿವೃದ್ಧಿಗಾಗಿ ಶ್ರಮ ಸಾಮರ್ಥ್ಯ ಯೋಜನೆಯಡಿ ಒಟ್ಟು 62,507 ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಅರ್ಹ ಸಂಸ್ಥೆಗಳ ಮೂಲಕ ವೃತ್ತಿ ಆದಾರಿತ ಆರ್. ಪಿ. ಎಲ್. ತರಬೇತಿಯನ್ನು ನೀಡಲಾಗಿದೆ.
</td></tr>
<tr><td>ಇ)</td><td>ಕೃಷಿಕಾರ್ಮಿಕರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್ ನೌಕರರ ಕೌಶಲ್ಯ ಅಭಿವೃದ್ಧಿಗಾಗಿ ಯಾವ ರೀತಿಯ ಯೋಜನೆಗಳನ್ನು ಕಾರ್ಮಿಕ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದೆ; ಈ ಕಾರ್ಯಕ್ರಮಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>

**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ;</u>**

ಈ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಕೌಶಲ್ಯ ಅಭಿವೃದ್ಧಿಗಾಗಿ ಶ್ರಮ ಸಾಮರ್ಥ್ಯ ಯೋಜನೆಯಡಿ ಒಟ್ಟು 62507 ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಅರ್ಹ ಸಂಸ್ಥೆಗಳ ಮೂಲಕ ವೃತ್ತಿ ಆಧಾರಿತ ಆರ್‌ಪಿಎಲ್ ತರಬೇತಿಯನ್ನು ನೀಡಲಾಗಿದೆ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-4 ರಲ್ಲಿ** ಲಗತ್ತಿಸಿದೆ.

**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ;</u>**

ಈ ಮಂಡಳಿ ವತಿಯಿಂದ ಕೃಷಿ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರಿಗೆ ಯಾವುದೇ ಕೌಶಲ್ಯ ತರಬೇತಿ ಕಾರ್ಯಕ್ರಮ ಇರುವುದಿಲ್ಲ.
</td></tr>
<tr><td>ಈ)</td><td>ಕಾರ್ಮಿಕರಿಗಾಗಿ ಪ್ರಸಕ್ತ ವರ್ಷ ಮೀಸಲಿಟ್ಟ ಅನುದಾನ ಎಷ್ಟು; ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗಾಗಿ ಇರುವ ಉಪಯೋಗಗಳಾವುವು; (ವಿವರ ನೀಡುವುದು)</td><td>

ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಕಾರ್ಮಿಕರಿಗೆ ನೀಡಲಾಗುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕಾ ಭದ್ರತಾ ಮಂಡಳಿಯಡಿ ನೀಡಲಾಗುವ ಸೌಲಭ್ಯಗಳು ಹಾಗೂ ಸದರಿ ಪ್ರಸಕ್ತ ವರ್ಷದಲ್ಲಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನದ ವಿವರ ಈ ಕೆಳಕಂಡಂತಿದೆ.

**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ;</u>**

ಈ ಮಂಡಳಿಯು ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ 861 ಕೋಟಿ ರೂ.ಗಳನ್ನು
</td></tr>
</table>

ಮೀಸಲಿಟ್ಟಿರುತ್ತದೆ. ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ಪಟ್ಟಿಯನ್ನು **ಅನುಬಂಧ-05ರಲ್ಲಿ** ಒದಗಿಸಲಾಗಿದೆ.

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ.**

| ಕ್ರ. ಸಂ | ಯೋಜನೆ | ಪ್ರಸ್ತಕ ಸಾಲಿನ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 01 | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | 500.00 |
| 02 | ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ | 1000.00 |
| 03 | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | 100.00 |
| 04 | ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ | 130.00 |

ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಜಾರಿಗೊಳಿಸುತ್ತಿರುವ ಯೋಜನೆಗಳ ಉಪಯೋಗಗಳು ಈ ಕೆಳಗಿನಂತಿವೆ;

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ**:- ಈ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

**ಅ) ಅಪಘಾತ ಪರಿಹಾರ**:-

ಖಾಸಗಿ ವಾಣಿಜ್ಯ ಸಾರಿಗೆ ಚಾಲಕರು ಅಪಘಾತದಿಂದ ನಿಧನರಾದ ಪ್ರಕರಣಗಳಲ್ಲಿ ಅವರ ನಾಮನಿರ್ದೇಶಿತರಿಗೆ ರೂ.5.00 ಲಕ್ಷ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಪ್ರಕರಣಗಳಲ್ಲಿ ರೂ.2.00 ಲಕ್ಷಗಳವರೆಗೆ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1.00 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ಮಾಡಲಾಗುತ್ತಿದೆ.

| | | |
|---|---|---|
| | | **<u>ಆ) ಶೈಕ್ಷಣಿಕ ಧನ ಸಹಾಯ:-</u>**<br>ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಒಂದನೇ ತರಗತಿಯಿಂದ ಪದವಿಪೂರ್ವ ತರಗತಿಯ ವರೆಗೆ ವ್ಯಾಸಂಗ ಮಾಡಲು ವಾರ್ಷಿಕ ತಲಾ ರೂ.10,000/-ರಂತೆ ಶೈಕ್ಷಣಿಕ ಸಹಾಯ ಧನ ವಿತರಿಸಲಾಗುತ್ತಿದೆ.<br>**<u>(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>**<br>ಈ ಯೋಜನೆಯಡಿ ಪ್ರಸ್ತುತ, 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ಉಚಿತವಾಗಿ ನೋಂದಾಯಿಸಿ ಗುರುತಿನ ಚೀಟಿ ನೀಡಲಾಗುತ್ತಿದ್ದು, ಯಾವುದೇ ಅರ್ಥಿಕ ಸೌಲಭ್ಯ ಒದಗಿಸುತ್ತಿಲ್ಲ.<br>**<u>(3)ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ :</u>**<br>ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರಿಗೆ (ಡೆಲಿವರಿ ಬಾಯ್ಸ್) 2.00 ಲಕ್ಷ ರೂ.ಗಳ ಜೀವ ವಿಮಾ ಸೌಲಭ್ಯ ಹಾಗೂ 2.00 ಲಕ್ಷ ರೂ.ಗಳ ಅಪಘಾತ ವಿಮಾ ಸೌಲಭ್ಯ ಸೇರಿದಂತೆ ಒಟ್ಟು 4.00 ಲಕ್ಷ ರೂ.ಗಳ ವಿಮಾ ಸೌಲಭ್ಯ ಒದಗಿಸಲು ಸರ್ಕಾರದ ಆದೇಶ ಸಂಖ್ಯೆ:ಕಾಇ 325 ಎಲ್ಇಟಿ 2023, ದಿನಾಂಕ: 07-09-2023 ರನ್ವಯ ಹೊಸದಾಗಿ "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ" ಯನ್ನು ರೂಪಿಸಿ ಆದೇಶಿಸಲಾಗಿರುತ್ತದೆ. ಸರ್ಕಾರಿ ಆದೇಶದನ್ವಯ ಗಿಗ್ ಕಾರ್ಮಿಕರನ್ನು ಸೇವಾ ಸಿಂಧು ಪೋರ್ಟಲ್ ನಲ್ಲಿ ನೋಂದಾಯಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಯೋಜನೆಯ ಜಾರಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | **(4) ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:-**<br>ಹೊಸದಾಗಿ ರೂಪಿಸಿರುವ ಈ ಯೋಜನೆಯಡಿ ದಿನಪತ್ರಿಕೆ ವಿತರಿಸುವ ಕಾರ್ಮಿಕ (News Paper Boy) ರಿಗೆ ರೂ.2.00 ಲಕ್ಷಗಳ ಅಪಘಾತ ಪರಿಹಾರ ಹಾಗೂ ರೂ.1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು, ಈ ಕುರಿತು ದಿನಾಂಕ: 22-11-2023 ರಂದು ಸರ್ಕಾರಿ ಆದೇಶ ಹೊರಡಿಸಲಾಗಿರುತ್ತದೆ. ಸರ್ಕಾರಿ ಆದೇಶದನ್ವಯ ಯೋಜನೆಯ ಜಾರಿಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br>**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ;**<br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ 2023-24ನೇ ಸಾಲಿಗೆ ಲೆಕ್ಕ ಶೀರ್ಷಿಕೆಯಡಿ 2230-01-103-4-00 (104) ರೂ.5.00 ಕೋಟಿ ಅನುದಾನ ಹಂಚಿಕೆಯಾಗಿದ್ದು, ಇಲ್ಲಿಯವರೆಗೆ ರೂ.333.32 ಲಕ್ಷಗಳಲ್ಲಿ ಸಹಾಯಾನುದಾನವಾಗಿ ಬಿಡುಗಡೆ ಮಾಡಲಾಗಿದೆ.<br>ಕಾರ್ಮಿಕ ಇಲಾಖೆಯಡಿಯಲ್ಲಿ ಬರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಸಂಘಟಿತ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1) ಕಾರ್ಮಿಕರ ಒಬ್ಬ ಮಗುವಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ<br>4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ |
| **ಉ)** | ಕಲ್ಯಾಣ ಕರ್ನಾಟಕ ಭಾಗದಲ್ಲಿ ಇರುವ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು; ಆ ಭಾಗದ ಬಹುತೇಕ ಕಾರ್ಮಿಕರಿಗೆ ಕಾರ್ಮಿಕರ ಕಾರ್ಡ್ | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಇರುವ ಒಟ್ಟು 1513 ಕಾರ್ಖಾನೆಗಳು, ಕಾರ್ಖಾನೆಗಳ ಕಾಯ್ದೆ 1948 ರಡಿಯಲ್ಲಿ ನೋಂದಾವಣೆಯಾಗಿರುತ್ತದೆ. ಸದರಿ ಕಾರ್ಖಾನೆ |

| | | |
|---|---|---|
| | ಬಗ್ಗೆ ಮಾಹಿತಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು? | ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಒಟ್ಟು ಸಂಖ್ಯೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ **ಅನುಬಂಧ-6ರಲ್ಲಿ** ಒದಗಿಸಲಾಗಿದೆ.<br><br>ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ Karnataka shops and commercial establishments act ರಡಿ ನೋಂದಣಿಯಾಗಿರುವ ಸಂಸ್ಥೆಗಳು ಹಾಗೂ ಅವುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ವಿವರಗಳನ್ನು **ಅನುಬಂಧ-7** ರಲ್ಲಿ ಒದಗಿಸಿದೆ.<br><br>ಕಲ್ಯಾಣ ಕರ್ನಾಟಕ ಭಾಗದಲ್ಲಿನ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಆದ್ದರಿಂದ ನಿಖರವಾದ ಕಾರ್ಮಿಕರ ಸಂಖ್ಯೆ ಲಭ್ಯವಿರುವುದಿಲ್ಲ ಆದರೆ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳು, ಕಾರ್ಯಕ್ರಮಗಳಡಿ ಫಲಾನುಭವಿಗಳಾಗಿ ನೋಂದಣಿಯಾಗಿರುವ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.**<br><br>ಕಲ್ಯಾಣ ಕರ್ನಾಟಕದ ಭಾಗದಲ್ಲಿ ಒಟ್ಟು: 13,46,217 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಾಯಿಸಲಾಗಿರುತ್ತದೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರ ನೋಂದಣಿ ಹಾಗೂ ಮಂಡಳಿಯ ಯೋಜನೆಗಳ ಬಗ್ಗೆ ಮುದ್ರಣ, ದೃಶ್ಯ ಮತ್ತು ಶ್ರವಣ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರ ನೀಡಿ ಕಾರ್ಮಿಕ ನೋಂದಣಿಗೆ ಅವಕಾಶ ಮಾಡಲಾಗಿದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ.**<br><br>ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ, ಈವರೆಗೆ ಯಾವುದೇ ಸಮೀಕ್ಷೆ ನಡೆದಿರುವುದಿಲ್ಲ. ಆದ್ದರಿಂದ, ಈ ಕುರಿತು ನಿಖರ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ |

ಯೋಜನೆ, ಕೋವಿಡ್-19ರ ವಿಶೇಷ ಪ್ಯಾಕೇಜ್ ಗಳಡಿ ಒಂದು ಬಾರಿ ನೆರವು ಕೋರಿ ಅರ್ಜಿ ಸಲ್ಲಿಸಿದ/ನೋಂದಣಿಯಾದ ಮತ್ತು ಇ-ಶ್ರಮ್ ಪೋರ್ಟಲ್‌ನಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ನೋಂದಣಿಗೊಂಡ ಅಸಂಘಟಿತ ಕಾರ್ಮಿಕರ ಮಾಹಿತಿಯು ಲಭ್ಯವಿದ್ದು, ವಿವರ ಈ ಕೆಳಕಂಡಂತಿದೆ.

| ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ | ಕೋವಿಡ್ -19ರ ವಿಶೇಷ ಪ್ಯಾಕೇಜ್ | ಇ-ಶ್ರಮ್ ಪ್ರೋಗ್ರಾಮ್ |
|---|---|---|---|
| ಬೀದರ್ | 4304 | 32962 | 270269 |
| ಕಲಬುರಗಿ | 7198 | 82386 | 370911 |
| ರಾಯಚೂರು | 9358 | 49137 | 222264 |
| ಯಾದಗಿರಿ | 3579 | 23762 | 152658 |
| ಬಳ್ಳಾರಿ | 20129 | 71462 | 400966 |
| ವಿಜಯನಗರ | - | 26010 | 219831 |
| ಕೊಪ್ಪಳ | 6396 | 39806 | 192346 |
| **ಒಟ್ಟು** | **50964** | **325525** | **1829245** |

ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ನೋಂದಣಿ ಹಾಗೂ ದೊರಕುವ ಸೌಲಭ್ಯಗಳ ಕುರಿತು ಅಸಂಘಟಿತ ಕಾರ್ಮಿಕರಿಗೆ ಅರಿವು ಇಲ್ಲದಿರುವುದನ್ನು ಗಮನಿಸಲಾಗಿದ್ದು, ಯೋಜನೆಗಳ ಕುರಿತು ಅರಿವು ಮೂಡಿಸಲು ಈ ಕೆಳಕಂಡ ಸಂವಹನ ಚಟುವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ.

- ಕರಪತ್ರ, ದಿನ ಪತ್ರಿಕೆ, ಬ್ಯಾನರ್ಸ್ ಹಾಗೂ ಹೋರ್ಡಿಂಗ್ಸ್ ಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
- ಯೋಜನೆಗಳಡಿ ನೋಂದಾಯಿಸಲು ಕ್ಯಾಂಪ್‌ಗಳನ್ನು ಏರ್ಪಡಿಸಲಾಗುತ್ತಿದೆ.
- ಉಚಿತ ಕಾರ್ಮಿಕ ಸಹಾಯವಾಣಿ 155214 ಮೂಲಕ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.
- ಯೋಜನೆಗಳ ಕುರಿತಂತೆ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಸಹ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

**ಕಾಇ 520 ಎಲ್‌ಇಟಿ 2023**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

## ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

2021-22, 2022-23 ಮತ್ತು 2023-24 (ನವೆಂಬರ್- 2023 ವರೆಗಿನ ಉದ್ಯೋಗ ಮೇಳದ ವಿವರ)

| ಕ್ರ ಸಂ | ಜಿಲ್ಲೆ | 2021-22 | | 2022-23 | | 2023-24 (ದಿ: 30-11-2023 ರವರೆಗೆ) | |
|---|---|---|---|---|---|---|---|
| | | ಆಯೋಜಿಸಿದ ಉದ್ಯೋಗ ಮೇಳಗಳ ಸಂಖ್ಯೆ | ಪ್ರಯೋಜನ ಪಡೆದವರ ಸಂಖ್ಯೆ | ಆಯೋಜಿಸಿದ ಉದ್ಯೋಗ ಮೇಳಗಳ ಸಂಖ್ಯೆ | ಪ್ರಯೋಜನ ಪಡೆದವರ ಸಂಖ್ಯೆ | ಆಯೋಜಿಸಿದ ಉದ್ಯೋಗ ಮೇಳಗಳ ಸಂಖ್ಯೆ | ಪ್ರಯೋಜನ ಪಡೆದವರ ಸಂಖ್ಯೆ |
| 1 | ಬಳ್ಳಾರಿ | 4 | 201 | 20 | 832 | 0 | 0 |
| 2 | ಕೊಪ್ಪಳ | 3 | 127 | 29 | 642 | 1 | 27 |
| 3 | ಕಲಬುರ್ಗಿ | 1 | 10 | 10 | 265 | 5 | 128 |
| 4 | ರಾಯಚೂರು | 4 | 72 | 14 | 687 | 3 | 82 |
| 5 | ಯಾದಗಿರಿ | 1 | 46 | 29 | 596 | 1 | 34 |
| 6 | ಬೀದರ್ | 3 | 08 | 2 | 68 | 0 | 0 |
| | ಒಟ್ಟು | **16** | **464** | **104** | **3090** | **10** | **271** |

# ಅನುಬಂಧ-2

## ಡಿಡಿಯು-ಜಿಕೆವೈ ಯೋಜನೆಯ 2021-22ನೇ ಸಾಲಿನ ಜಿಲ್ಲಾವಾರು ಅಪರೆಲ್ ಟ್ರೇಡ್‌ನ ವಿವರ

DDUGKY 2021-22 District wise Apparel trade data as on 28 Nov 2023

| ಕ್ರ.ಸಂ | ಜಿಲ್ಲೆ | ವಲಯದ ಹೆಸರು | ವ್ಯಾಪಾರದ ಹೆಸರು | ತರಬೇತಿ ಹೊಂದಿದ ಅಭ್ಯರ್ಥಿಗಳು | ಉದ್ಯೋಗ ಹೊಂದಿದ ಅಭ್ಯರ್ಥಿಗಳು |
|---|---|---|---|---|---|
| 1 | ಬಾಗಲಕೋಟೆ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 78 | 76 |
| 2 | ಬೀದರ್ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 103 | 102 |
| 3 | ಬಿಜಾಪುರ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 49 | 40 |
| 4 | ಚಾಮರಾಜನಗರ | ಉಡುಪು | ಹೊಲಿಗೆ ಯಂತ್ರ ಆಪರೇಟರ್ | 80 | 69 |
| 5 | ಚಿತ್ರದುರ್ಗ | ಉಡುಪು | ಹೊಲಿಗೆ ಯಂತ್ರ ಆಪರೇಟರ್ | 116 | 112 |
| 6 | ಗುಲ್ಬರ್ಗ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 51 | 49 |
| 7 | ಹಾಸನ | ಗಾರ್ಮೆಂಟ್ ತಯಾರಿಕೆ | ಟೈಲರ್ (ಮೂಲ ಹೊಲಿಗೆ ಆಪರೇಟರ್) | 400 | 111 |
| 8 | ಹಾವೇರಿ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 43 | 43 |
| 9 | ಕೋಲಾರ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 60 | 25 |
| 10 | ರಾಯಚೂರು | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 81 | 81 |
| 12 | ತುಮಕೂರು | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 81 | 51 |
| 13 | ಯಾದಗಿರಿ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 83 | 81 |
| | | | ಒಟ್ಟು | **1225** | **840** |

# ಅನುಬಂಧ-3

DDUGKY 2022-23 District wise Apparel trade data as on 28 Nov 2023

ಡಿಡಿಯು-ಜಿಕೆವೈ ಯೋಜನೆಯ 2022-23ನೇ ಸಾಲಿನ ಜಿಲ್ಲಾವಾರು ಅಪರೆಲ್ ಟ್ರೇಡ್‌ನ ವಿವರ

| ಕ್ರ.ಸಂ | ಜಿಲ್ಲೆ | ವಲಯದ ಹೆಸರು | ವ್ಯಾಪಾರದ ಹೆಸರು | ತರಬೇತಿ ಹೊಂದಿದ ಅಭ್ಯರ್ಥಿಗಳು | ಉದ್ಯೋಗ ಹೊಂದಿದ ಅಭ್ಯರ್ಥಿಗಳು |
|---|---|---|---|---|---|
| 1 | ಬಾಗಲಕೋಟೆ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 44 | 43 |
| 4 | ಬೀದರ್ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 83 | 83 |
| 6 | ಚಾಮರಾಜನಗರ | ಉಡುಪು | ಹೊಲಿಗೆ ಯಂತ್ರ ಆಪರೇಟರ್ | 88 | 54 |
| 9 | ಚಿತ್ರದುರ್ಗ | ಉಡುಪು | ಹೊಲಿಗೆ ಯಂತ್ರ ಆಪರೇಟರ್ | 141 | 138 |
| 10 | ಧಾರವಾಡ | ಗಾರ್ಮೆಂಟ್ ತಯಾರಿಕೆ | ಕೈಗಾರಿಕಾ ಹೊಲಿಗೆ ಯಂತ್ರ ನಿರ್ವಾಹಕರು | 90 | 40 |
| 11 | ಗುಲ್ಬರ್ಗ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 29 | 20 |
| 12 | ಹಾಸನ | ಗಾರ್ಮೆಂಟ್ ತಯಾರಿಕೆ | ಟೈಲರ್ (ಮೂಲ ಹೊಲಿಗೆ ಆಪರೇಟರ್) | 317 | 107 |
| 14 | ಕೋಲಾರ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 100 | 35 |
| 15 | ಕೊಪ್ಪಳ | ಉಡುಪು | ಸ್ವಯಂ ಉದ್ಯೋಗದ ಟೈಲರ್ | 35 | 15 |
| 18 | ರಾಯಚೂರು | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 39 | 36 |
| 19 | ಶಿವಮೊಗ್ಗ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 70 | 59 |
| 20 | ತುಮಕೂರು | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 23 | 8 |
| 21 | ಯಾದಗಿರಿ | ಉಡುಪು, ಮೇಡ್-ಅಪ್‌ಗಳು ಮತ್ತು ಗೃಹ ಸಜ್ಜುಗೊಳಿಸುವಿಕೆ | ಹೊಲಿಗೆ ಯಂತ್ರ ಆಪರೇಟರ್ | 84 | 71 |
| | | | **ಒಟ್ಟು** | **1143** | **709** |

# ಅನುಬಂಧ-4

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 453**

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**

**District wise RPL training Details**

| Sl.No. | Name of District | No. of Candidates |
|---|---|---|
| 1 | Ballari | 5312 |
| 2 | Bengaluru Rural | 665 |
| 3 | Bengaluru Urban | 930 |
| 4 | Bidar | 3914 |
| 5 | Chamarajanagar | 8142 |
| 6 | Chitradurga | 2031 |
| 7 | Chickkaballapur | 1984 |
| 8 | Davanagere | 2767 |
| 9 | Gadag | 3680 |
| 10 | Hassan | 2431 |
| 11 | Haveri | 404 |
| 12 | Kalaburagi | 682 |
| 13 | KGF | 2021 |
| 14 | Kolar | 13275 |
| 15 | Koppal | 4025 |
| 16 | Mysore | 864 |
| 17 | Mandya | 1665 |
| 18 | Tumakuru | 4395 |
| 19 | Uttara kannada | 3320 |
| | **Total** | **62507** |

## ಅನುಬಂಧ -5

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 453

ಮಂಡಳಿಯ ವತಿಯಿಂದ ಅನುಷ್ಠಾನಗೊಳಿಸಿರುವ ಸೌಲಭ್ಯಗಳು ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ;

1. **ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ. 3,000/-**
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ/ಪತ್ನಿಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದರೆ ಮಾಸಿಕ **ರೂ. 2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ. 2,00,000/-** ದವರೆಗೆ ಅನುಗ್ರಹರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ. 30,000/- ವರೆಗೆ**
6. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
7. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ. 50,000/-
8. **ಶಿಶುಪಾಲನಾ ಸೌಲಭ್ಯ: 06 ತಿಂಗಳಿನಿಂದ 06 ವರ್ಷ್ದ ಮಕ್ಕಳ ಲಾಲನೆ ಪಾಲನೆಗಾಗಿ ಶಿಶುಪಾಲನಾ ಕೇಂದ್ರಗಳ ಸ್ಥಾಪನೆ.**
9. **ಅಂತ್ಯಕ್ರಿಯೆ ವೆಚ್ಚ :ರೂ. 4,000/-** ಹಾಗೂ ಅನುಗ್ರಹ ರಾಶಿ **ರೂ. 71,000/**-ಸಹಾಯಧನ
10. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

| ಕ್ರ ಸಂ | ವಿದ್ಯಾಭ್ಯಾಸದ ವಿವರ (ತರಗತಿ ಅಥವಾ ಕೋಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿಕ ಸಹಾಯಧನ ಮೊತ್ತ (ರೂ. ಗಳಲ್ಲಿ) |
|---|---|---|
| 1 | 1 ರಿಂದ 5 ನೇ ತರಗತಿ | 1,100 |
| 2 | 6 ರಿಂದ 7 ನೇ ತರಗತಿ | 1,250 |
| 3 | 8 ನೇ ತರಗತಿ | 1,350 |
| 4 | 9 ಹಾಗೂ 10ನೇ ತರಗತಿ | 3,000 |
| 5 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 4,600 |
| 6 | ಪದವಿ | 6,000 |
| 7 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | 10,000 |
| 8 | ಸ್ನಾತಕೋತ್ತರ ಪದವಿ | 10,000 |
| 9 | ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ | 4,600 |
| 10 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್ / ಎಕ್ಸಲರಿ ನರ್ಸಿಂಗ್ ಅಂಡ್ ಮಿಡ್ವೈಫ್ | 10,000 |
| 11 | ಬಿ.ಎಡ್ | 6,000 |

| ಕ್ರ ಸಂ | ವಿದ್ಯಾಭ್ಯಾಸದ ವಿವರ<br>(ತರಗತಿ ಅಥವಾ ಕೋರ್ಸ್ ಅಥವಾ ಗ್ರೇಡ್) | ವಾರ್ಷಿಕ ಶೈಕ್ಷಣಿ ಸಹಾಯಧನ ಮೊ. (ರೂ. ಗಳಲ್ಲಿ) |
|---|---|---|
| 12 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ ಎಸ್/ ಬಿಡಿಎಸ್ /ಬಿಹೆಚ್‌ಎಮ್ ಎಸ್ ಕೋರ್ಸ್ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್ | 11,000 |
| 13 | ಎಲ್‌ಎಲ್ ಬಿ/ಎಲ್ ಎಲ್ ಎಂ | |
| 14 | ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) | 10,000<br>10,000 |
| 15 | ಎಮ್‌ಡಿ ಮೆಡಿಕಲ್ | |
| 16 | ಡಿ.ಎಡ್ | 12,000 |
| 17 | ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ) | 4,600<br>11,000 |
| 18 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ಎಐಐಎಮ್‌ಎಸ್/ ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸುಗಳು. | 11,000 |

11. **ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ. 300/- ರಿಂದ ರೂ. 20,000/-**ವರೆಗೆ.
12. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ **ರೂ. 5,00,000/-**ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-**
13. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸ್ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತಚಿಕಿತ್ಸೆ, ಗರ್ಭಕೋಶ ಶಸ್ತಚಿಕಿತ್ಸೆ, ಅಸ್ತಮಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ಚಿಕಿತ್ಸೆ, ಡಯಾಲಿಸಿ ಚಿಕಿತ್ಸೆ, ಕಿಡ್ನಿಶಸ್ ಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರ ಚಿಕಿತ್ಸೆ, ವ್ಯಾಸ್ಕ್ಯೂಲರ್ಯಲ ಶಸ್ತ್ರ ಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಹರ್ನಿಯ ಶಸ್ತ್ರ ಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರ ಚಿಕಿತ್ಸೆ, ಮೂಳೆಮುರಿತ/ ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**
14. **ಮದುವೆ ಸಹಾಯ ಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ **ತಲಾ ರೂ.60,000/-**
15. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ. 6,000/- ಗಳ** ಸಹಾಯಧನ.

........

# ಅನುಬಂಧ - 6

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಶಶೀಲ್ ಜಿ. ನಮೋಶಿ
(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂ. 453

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರ್ಖಾನೆಗಳ ಕಾಯ್ದೆ 1948 ರಡಿಯಲ್ಲಿ ನೋಂದಾವಣೆಯಾಗಿರುವ ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇರುವ ಕಾರ್ಮಿಕರ ಒಟ್ಟು ಸಂಖ್ಯೆ :

| ಕ್ರ.ಸಂ. | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು | ನೋಂದಾವಣೆಯಾದ ಕಾರ್ಖಾನೆಗಳ ಸಂಖ್ಯೆ | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|---|
| 1 | ಬಳ್ಳಾರಿ | 378 | 48576 | 2681 | 51257 |
| 2 | ಬೀದರ್ | 145 | 8669 | 867 | 9536 |
| 3 | ಕಲಬುರಗಿ | 178 | 17983 | 1134 | 19117 |
| 4 | ಯಾದಗಿರಿ | 86 | 2110 | 329 | 2439 |
| 5 | ರಾಯಚೂರು | 420 | 13067 | 3352 | 16419 |
| 6 | ಕೊಪ್ಪಳ | 225 | 16843 | 1595 | 18438 |
| 7 | ವಿಜಯನಗರ | 81 | 9196 | 501 | 9703 |
| ಒಟ್ಟು | | 1513 | 116444 | 10459 | 126909 |

Group-7

# Kalyana Karnataka Shops and Commercial EstablishmentS Details

| SN | District Name | Total Shops & CE Registerd | Male | Female | Total Workers |
|---|---|---|---|---|---|
| 1 | Bidar | 4054 | 15363 | 2979 | 18342 |
| 2 | Kalburgi | 5684 | 28096 | 5505 | 33601 |
| 3 | yadgiri | 4002 | 17679 | 3337 | 21016 |
| 4 | Koppala | 3095 | 13053 | 2002 | 15055 |
| 5 | Raichur | 5856 | 21165 | 3623 | 24788 |
| 6 | Bellary | 3702 | 32676 | 8192 | 40868 |
| 7 | Vijayanagar | 3886 | 21268 | 3836 | 25104 |
| | **Grand total** | **30279** | **149300** | **29474** | **178774** |